ಸರ್ಕಾರ ಎಲ್ಲಾ ಪ್ರಯತ್ನಗಳನ್ನು ಮುಂದಿವರೆಸಿದೆ. 30 ಕೋಟಿ ರೂಪಾಯಿಗಳಿಗೂ ಹೆಚ್ಚಿನ ವೆಚ್ಚವನ್ನು ಇದಕ್ಕೆ ಯೋಜಿಸಲಾಗಿದೆ. ಬರತಕ್ಕಂಥ ಕಾಲದಲ್ಲಿ ಇರತಕ್ಕಂಥ ಹಳ್ಳಿಗಳಿಗೂ ಕೂಡ ಕುಡಿಯುವ ನೀರನ್ನು ಒದಗಿಸಿಕೊಡಬೇಕು ಎನ್ನತಕ್ಕಂಥ ನಮ್ಮ ಸರ್ಕಾರದ ಅಮೆಂಡೆಡ್ ಪಾಲಿಸಿ ಏನಿದೆ, ಆ ಪಾಲಿಸಿ ಪ್ರೊಕ್ಟಿನಲ್ಲಿ 23 ಗ್ರಾಮಗಳಿಗೂ ಕೂಡ ಕುಡಿಯುವ ನೀರನ್ನು ಪ್ರತೀ ದಿವಸ 135 ಲೀಟರ್‌ನಂತೆ ಕೊಡಬೇಕೆಂದು 40 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿದ್ದೇವೆ. ಅದನ್ನು ನಾವು ಜಾರಿಗೆ ಕೊಡುತ್ತೇವೆ.

ಇ-ಆಡಳಿತ ಕಾರ್ಯಕ್ರಮ

348 (3158) : ಶ್ರೀ ಸಭಾಪತಿ ಯು.ಆರ್. (ಉಡುಪಿ), : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರ ತನ್ನ ಇ-ಆಡಳಿತ (e-Governance) ಜಾರಿಗೆ ತಂದಿದ್ದು ಇದರ ಜಿಲ್ಲಾವಾರು ಪ್ರಗತಿಯ ವಿವರಗಳನ್ನು ತಿಳಿಸುವುದು;

ಆ) ವಿಧಾನಸೌಧ, ಬಹುಮಹಡಿ ಕಟ್ಟಡಗಳಲ್ಲಿನ ಸಚಿವಾಲಯದಲ್ಲಿ ಅನುಷ್ಠಾನಕ್ಕೆ ಬಂದಿರುವ (31.3.2003)ರವರೆಗೆ ಇ-ಆಡಳಿತ ಕಾರ್ಯಕ್ರಮದ ಪ್ರಗತಿಯ ವಿವರ ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) ಸರ್ಕಾರವು ತನ್ನ ಇ-ಆಡಳಿತ ಕಾರ್ಯನೀತಿಯನ್ನು ದಿ: 22-8-2002ರಂದು ಪ್ರಕಟಿಸಿದೆ. ಅದರನ್ವಯ, ವಿವಿಧ ಮೈಲಿಗಲ್ಲುಗಳನ್ನು ಗೊತ್ತುಪಡಿಸಲಾಗಿದೆ. ಪ್ರಸ್ತುತ, ಇ-ಆಡಳಿತ ಕಾರ್ಯಚಟುವಟಿಕೆಗಳಿಗೆ ಒತ್ತು ನೀಡುವುದಕ್ಕಾಗಿ ಕಾರ್ಯದರ್ಶಿ, ಇ-ಆಡಳಿತ ಹುದ್ದೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕೆಳಗೆ ನೀಡಲಾಗಿದೆ. ಇ-ಆಡಳಿತ ಕಾರ್ಯನೀತಿಯಲ್ಲಿ ಜಿಲ್ಲಾವಾರು ಕಾರ್ಯಕ್ರಮಗಳನ್ನು ಉದ್ದೇಶಿಸಿರುವುದಿಲ್ಲ. ಇ-ಆಡಳಿತ ಕಾರ್ಯಕ್ರಮಗಳು ನಾಗರಿಕ ಅವಶ್ಯಕತೆಗಳನ್ನು ಆಧರಿಸಿವೆ ಮತ್ತು ವಿವಿಧ ಕ್ಷೇತ್ರ ಇಲಾಖೆಗಳಿಂದ ನಿರ್ವಹಿಸಲ್ಪಡುತ್ತವೆ.

ಆ) ಸಚಿವಾಲಯದಲ್ಲಿ, ಆಧುನಿಕ ರೀತಿಯ ಪ್ರಾದೇಶಿಕ ಕ್ಷೇತ್ರ ಗಣಕ ಜಾಲ (Local Area Network) ನ್ನು ಅಳವಡಿಸಲಾಗಿದೆ. 700ಕ್ಕಿಂತ ಹೆಚ್ಚು ಗಣಕಯಂತ್ರಗಳನ್ನು ಶಾಖಾಧಿಕಾರಿ ಹಂತದವರೆಗೆ ಒದಗಿಸಲಾಗಿದೆ. ಕಡತ ನಿರ್ವಹಣಾ ಪದ್ಧತಿ, ಪತ್ರ ನಿರ್ವಹಣಾ ಪದ್ಧತಿ, ಇ-ಮೈಲ್, ಇಂಟರ್ ನೆಟ್ ಮುಂತಾದ ತಂತ್ರಾಂಶಗಳನ್ನು ಆಯೋಜಿಸಲಾಗಿದೆ. ಒಂದು ವೆಬ್ ಸರ್ವರ್ ಮತ್ತು ಬೃಹತ್ ಇ-ಮೈಲ್ ಸರ್ವರ್ ಅನ್ನು ಸದ್ಯದಲ್ಲೇ ಅಳವಡಿಸಲು ಯೋಜಿಸಲಾಗಿದೆ. ರಜಾ ನಿರ್ವಹಣಾ ವ್ಯವಸ್ಥೆ, ಸಿಬ್ಬಂದಿ ಮಾಹಿತಿ ವ್ಯವಸ್ಥೆ, ನಾಲೆಡ್ಜ್ ಅಡ್ಮಿನಿಸ್ಟ್ರೇಷನ್ ಸಿಸ್ಟಮ್ ಮುಂತಾದ ಹೊಸ ಪ್ಯಾಕೇಜ್‌ಗಳನ್ನು ಮುಂಬರುವ ವರ್ಷಗಳಲ್ಲಿ ಅಳವಡಿಸಲು ಯೋಜಿಸಲಾಗಿದೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನದ ಅನುಷ್ಠಾನದ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಆಡಳಿತದಲ್ಲಿ, ಇ-ಆಡಳಿತ ಕಾರ್ಯನೀತಿಯಲ್ಲಿ ಜಿಲ್ಲಾವಾರು ಕಾರ್ಯಕ್ರಮಗಳನ್ನು ಉದ್ದೇಶಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ ಒಂದು ಜಿಲ್ಲೆಯನ್ನು ಪೈಲಟ್ ಪ್ರಾಜೆಕ್ಟ್ ಆಗಿ ತೆಗೆದುಕೊಂಡು ಸಂಪೂರ್ಣವಾಗಿ 'ಇ-ಆಡಳಿತವನ್ನು' ಒಂದು ಕಾರ್ಯರೂಪಕ್ಕೆ ತರುವಂಥ ಕಾರ್ಯ ಕ್ರಮವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಹಾಗೆಯೇ ಕೆಲವು ಗ್ರಾಮಪಂಚಾಯತಿ ವ್ಯಾಪ್ತಿಗಳಲ್ಲಿ ಮತ್ತು ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ ಗಣಕೀಕರಣ ಮಾಡುವ ವ್ಯವಸ್ಥೆಗೆ ನಾವು ಶಾಸಕರ

ನಿಧಿಯಿಂದ ಅದಕ್ಕೆ ಬೇಕಾದಂಥ ಹಣವನ್ನು ಒದಗಿಸುವುದಾದರೆ ಆ ಮಾರ್ಗದರ್ಶಿ ಸೂಚಿಯಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಟ್ಟರೆ ನಾವು ಅದನ್ನು ಒಳಪಡಿಸಲಿಕ್ಕೆ ಪ್ರಯತ್ನಪಡುತ್ತೇವೆ. ಅದೇ ರೀತಿ ಅನೇಕ ಜನ ಸಂಸತ್ ಸದಸ್ಯರು ಈ ಮಾಹಿತಿ ತಂತ್ರಜ್ಞಾನ ಅಳವಡಿಕೆಗೆ, ಗಣಕೀಕರಣಕ್ಕೆ ಹಣ ಕೊಡುತ್ತೇವೆಂದು ಹೇಳಿ ಕೊಟ್ಟಿದ್ದರು. ಆದರೆ ಮಾರ್ಗಸೂಚಿಯಲ್ಲಿ ಅದಕ್ಕೆ ಅವಕಾಶವಿಲ್ಲವೆಂದು ಜಿಲ್ಲಾಧಿಕಾರಿಗಳು ಅದನ್ನು ಹಿಂದಕ್ಕೆ ಕಳುಹಿಸಿದ್ದಾರೆ. ಆದ್ದರಿಂದ ಸರ್ಕಾರ ಸಂಸತ್ ಸದಸ್ಯರ ಹಣವನ್ನು ಉಪಯೋಗಿಸಲು ಮಾಹಿತಿ ತಂತ್ರಜ್ಞಾನ ಇಲಾಖೆ ಮೂಲಕ ಅಥವಾ ಸಂಸತ್ ಸದಸ್ಯರ ಮಾರ್ಗಸೂಚಿಯಲ್ಲಿ ಈ ಬಗ್ಗೆ ಬದಲಾವಣೆ ತರಲಿಕ್ಕೆ ಪ್ರಯತ್ನಪಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಸ್ವಾಗತಾರ್ಹವಾಗಿದೆ. ರಾಜ್ಯಸರ್ಕಾರದ ಉದ್ದೇಶ ಏನೆಂದರೆ, ಈ 'ಇ-ಆಡಳಿತ' ಇನ್ನೂ ಹೆಚ್ಚು ಕ್ಷೇತ್ರಗಳಿಗೆ ವಿಸ್ತರಿಸಬೇಕು, ಮತ್ತು ಇನ್ನೂ ಹಲವಾರು ವೆಬ್‌ಸೈಟ್‌ಗಳನ್ನು ನಿರ್ಮಾಣ ಮಾಡಬೇಕು, ಅದಕ್ಕೆ ಇತ್ತೀಚೆಗೆ ತಾನೇ 'ಇ-ಆಡಳಿತ ಇಲಾಖೆಯನ್ನು' ನಾವು ಪ್ರಾರಂಭ ಮಾಡಿರತಕ್ಕಂಥ ಉದ್ದೇಶವೇನೆಂದರೆ, ಈ 'ಇ-ಆಡಳಿತ' ಕ್ಕೆ ಹೆಚ್ಚು ಒತ್ತು ಕೊಡಬೇಕು, ನಮ್ಮ 'ಭೂಮಿ', 'ಖಜಾನೆ', 'ಕಾವೇರಿ' ಈ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿರತಕ್ಕಂಥ ಕಾರ್ಯಕ್ರಮಗಳಾಗಿವೆ. ಈ ಕಾರ್ಯಕ್ರಮಗಳು ನಮಗೆ ಒದಗಿಸಿಕೊಟ್ಟಿರತಕ್ಕಂಥ ಅನುಭವದ ಹಿನ್ನೆಲೆಯಲ್ಲಿ, ಇದರ ಆಧಾರದ ಮೇಲೆ ಇಡೀ ರಾಜ್ಯದಲ್ಲಿ 'ಇ-ಆಡಳಿತ' ಕರ್ನಾಟಕ ರಾಜ್ಯದಲ್ಲಿ ಪ್ರಾರಂಭವಾಗದೆ ಇನ್ನು ಎಲ್ಲಿಯೂ ಪ್ರಾರಂಭವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರು ಈ ವಿಚಾರದಲ್ಲಿ ತಮ್ಮದೇ ಆದಂಥ ಪರಿಣತಿಯನ್ನು ಪಡೆದಿದ್ದಾರೆ ಎನ್ನತಕ್ಕಂಥದ್ದು ಸರ್ಕಾರಕ್ಕೆ ಗೊತ್ತಿದೆ. ಅವರ ಸಲಹೆಗಳನ್ನು ನಾವು ಸ್ವಾಗತಿಸುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಸರ್ಕಾರದ ಕಾರ್ಯಕ್ರಮದ ಬಗ್ಗೆ ಹಲವಾರು ಇಲಾಖೆಗಳು ಆಯಾಯ ಇಲಾಖೆಯ ವೆಬ್ ಸೈಟ್ ಗಳನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಆದರೆ ಅದನ್ನು ಆಗಿಂದಾಗ್ಗೆ ಅಪ್-ಟು-ಡೇಟ್ ಮಾಡಲಿಲ್ಲ. 2 ವರ್ಷದ ಹಿಂದೆ ತಂದ ವೆಬ್‌ಸೈಟ್ ಅದೇ ರೀತಿ ಮುಂದುವರಿಯುತ್ತಿದೆ. ಅದನ್ನು ಆಗಿಂದಾಗ್ಗೆ ಅಪ್-ಟು-ಡೇಟ್ ಮಾಡುವಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಕೇಳಿಕೋಳ್ಳುತ್ತೇನೆ. ಅದರ ಜೊತೆಗೆ ಯಾವ ಇಲಾಖೆಗಳು ವೆಬ್ ಸೈಟ್ ಮಾಡಲಿಲ್ಲ ಆ ಇಲಾಖೆಗಳು ವೆಬ್ ಸೈಟ್ ಅನ್ನು ಮಾಡಿ ಸರ್ಕಾರದ ಕಾರ್ಯಕ್ರಮದ ಪಾರದರ್ಶಕತೆಯನ್ನು ಪ್ರದರ್ಶಿಸಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಒಪ್ಪತಕ್ಕಂಥ ಸಲಹೆ.

ಮೈಸೂರು ನಗರದ ನ್ಯಾಯಾಲಯ ಕಟ್ಟಡಗಳ ಅಭಿವೃದ್ಧಿ

358 (2761) : **ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.** (ಚಾಮರಾಜಕ್ಷೇತ್ರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿನ ನ್ಯಾಯಾಲಯದ ಆವರಣದಲ್ಲಿರುವ ಕಟ್ಟಡಗಳು ಎಷ್ಟು? ಈ ಕಟ್ಟಡಗಳ ಪೈಕಿ ಯಾವ ಯಾವ ಕಟ್ಟಡಗಳನ್ನು ಯಾವ ಯಾವ ವರ್ಷಗಳಲ್ಲಿ ನಿರ್ಮಿಸಲಾಗಿದೆ (ವಿವರ ನೀಡುವುದು)